ಕೂಗು. ಪಕ್ಕದಲ್ಲೇ ಜನಗಳು, ದೂಳು, ಗಲಾಟೆ, ವಿಧ ವಿಧವಾದ ಶಬ್ದಗಳು. ಈ ಎಲ್ಲಾ ಶಬ್ದಗಳೂ ಅವನಿಗೆ ಚಿರಪರಿಚಿತ. ಈ ಶಬ್ದಗಳ ಒಂದು ರೀತಿಯ ಹೊದಿಕೆ ಇವನ ಮನಸ್ಸಿನ ಮೇಲೆ ಮುಚ್ಚಿಹೋಗಿತ್ತು. ಆ ಹೊದಿಕೆಯೊಳಗೊಳಗೆ ಸ್ವಭಾವದಿಂದಲೇ ಬಾಲ್ಯಕ್ಕೆ ಬರುವ ಪ್ರಕೃತಿಯ ಶಬ್ದಗಳಿಗೆ ಓಗೊಡುವ ಅಭ್ಯಾಸ ಸಮಾಧಿಯಾಗಿತ್ತು. ಸಮುದ್ರದ ಭೋರ್ಗರೆತ, ಹಕ್ಕಿಗಳ ಚಿಲಿಪಿಲಿ, ತೊರೆಗಳ ಜುಳು ಜುಳು, ಅಮ್ಮನ ಹಾಡಿನ ಮಧುರ ಶಬ್ದಗಳಿಗೆ ಅವನು ಪೂರ್ತಿ ಅಪರಿಚಿತ. ಅಲ್ಲದೆ, ನಿರಂತರವಾಗಿ ಎಡಬಿಡದೆ ಅವನನ್ನು ಸುತ್ತುವರಿದಿತ್ತು ಚರ್ಮದ ಪಾಲಿಶ್‌ನ ವಾಸನೆ. ಮತ್ತೆಲ್ಲಾ ಪರಿಮಳಗಳಿಗೆ ಅವನ ಪ್ರತಿಕ್ರಿಯೆಯೇ ಜೋಮು ಹಿಡಿಸಿತ್ತು ಆ ವಾಸನೆ. ಮನೆಗೆ ಹೋಗಿ ಮೂಲೆಯಲ್ಲಿಟ್ಟಿರುತ್ತಿದ್ದ ಅಗ್ಗದ, ಬಟ್ಟೆಯ ಸಾಬೂನಿನಲ್ಲಿ ಉಜ್ಜಿ ಉಜ್ಜಿ ಕೈ ಮೈ ತೊಳೆದ ಮೇಲೂ ಅವನನ್ನು ಪೂರ್ತಿ ಬಿಡದೆ ಸುತ್ತಿಕೊಂಡೇ ಇರುತ್ತಿತ್ತು. ಶೂಗಳ ವಾಸನೆ– ಯಾವಾಗಲೂ ಅವನಿಗೆ ತನ್ನ ವೃತ್ತಿಯ ನೆನಪು ಕೊಡುತ್ತಿತ್ತು.

ಅವನು ಜಗತ್ತಿಗೆ 'ಶೂ ಪಾಲಿಶ್ ಹುಡುಗ' ಮಾತ್ರ. ಅವನಿಗೇ ದಿನಕ್ಕೆ ಒಂದೋ ಎರಡೋ ಬಾರಿ ಮಾತ್ರ ಕೇಳಿಬರುತ್ತಿದ್ದ ತನ್ನ ಹೆಸರು ಕಿವಿಯ ಮೇಲೆ ಬಿದ್ದಾಗ, ಬೆಚ್ಚಿ ಬೀಳುವ ಹಾಗಾಗುತ್ತಿತ್ತು. ಅವನ ಪ್ರಪಂಚ ಬರಿಯ ಶೂಗಳದು. ಅವನ ದಿನನಿತ್ಯದ ಜೀವನದಲ್ಲಿ ಯಾವ ಏರುಪೇರೂ ಇಲ್ಲ. ದಿನದ ಗಳಿಕೆಯೂ ಹಾಗೇ, ಒಂದು ದಿನ ಸ್ವಲ್ಪ ಹೆಚ್ಚು, ಒಂದು ದಿನ ಸ್ವಲ್ಪ ಕಡಿಮೆ. ಸ್ತಬ್ಧವಾದ ಕೊಳದಂತಿದ್ದ ಆ ಜೀವನವನ್ನು ಆಗಾಗ ರಂಗೇರಿಸುತ್ತಿದ್ದ ಘಟನೆಗಳೆಂದರೆ– ಯಾವಾಗಲಾದರೂ ಎದುರುಗಡೆಯೇ ಇದ್ದ ಬಸ್ ಸ್ಟಾಪಿನಲ್ಲಿ ಗಲಾಟೆಯ ಸಮಯದಲ್ಲಿ ಯಾರಾದರೂ ಕ್ಯೂ ಮುರಿದಾಗ ಆಗುತ್ತಿದ್ದ ಜಗಳ, ಅಥವಾ ಸ್ವಲ್ಪ ದೂರದಲ್ಲೇ ಇದ್ದ ಸಿನೆಮಾ ಮಂದಿರದ ಮುಂದೆ 'ಬ್ಲ್ಯಾಕ್'ನಲ್ಲಿ ಟಿಕೆಟ್ ಮಾರುವ ಹುಡುಗರ ಮಧ್ಯೆ ಆಗುತ್ತಿದ್ದ ಚಕಮಕಿ. ಒಂದೊಂದು ಬಾರಿ ಸಾಯಂಕಾಲ ಗೋಡೆಯಾಚೆ ಇಸ್ಪೀಟಾಡುವ ಹುಡುಗರ ಮಧ್ಯೆ ಆಗುತ್ತಿದ್ದ ಹೊಡೆದಾಟ, ಹತ್ತಿರದಲ್ಲೆ ಇದ್ದ ಯಾವುದಾದರೂ ಮಿಲ್‌ನ ಕೆಲಸಗಾರರು ಹರತಾಳ ಮಾಡಿದಾಗ, ತೆಗೆದುಕೊಂಡು ಹೋಗುತ್ತಿದ್ದ ಮೋರ್ಚಾ.

ದಿನಾ ಕೆಲಸ ಮುಗಿಸಿ, ಜೋಪಡಿಗೆ ತನ್ನ ದಿನದ ಗಳಿಕೆಯನ್ನು ಕಾಕಿಯ ಕೈಗೆ ಹಾಕಿ, ಅವಳು ಬಡಿಸಿದ ರೊಟ್ಟಿ ತಿಂದು ಮಲಗಿದರೆ ಬೆಳಿಗ್ಗೆ ಎದ್ದ ತಕ್ಷಣ ಮತ್ತೆ ಶುರು. ಕಾಕಿ! ಅವಳು ಹೇಗೆ ತನಗೆ 'ಕಾಕಿ' ಎನ್ನುವುದೂ ಅವನಿಗೆ ಗೊತ್ತಿರಲಿಲ್ಲ. ಅಪ್ಪ ಸತ್ತ ಮೇಲೆ ಯಾವುದೋ ಹತ್ತಿರದ ಹಳ್ಳಿಯಿಂದ ಒಂದು ದಿನ ಈ ಕಾಕಿ ಬಂದು, ತಮ್ಮ ಜೋಪಡಿಯನ್ನು ಆವರಿಸಿಕೊಂಡಿದ್ದಳು. ಅವನು ಯಾವ ಪ್ರಶ್ನೆಯೂ ಇಲ್ಲದೆ ಕಾಕಿಯನ್ನು ಸ್ವೀಕರಿಸಿದ್ದ. ಅವಳನ್ನು ಬಿಟ್ಟರೆ ತನ್ನವರೆನ್ನುವವರು ಅವನಿಗೆ ಯಾರೂ ಇರಲಿಲ್ಲ. ಅವಳು ತನ್ನ ಕರ್ತವ್ಯವೆನ್ನುವಂತೆ ದಿನನಿತ್ಯದ ಕೆಲಸ ಮಾಡಿಕೊಂಡು ಹೋಗುತ್ತಿದ್ದಳು. ಕಾಕಿ ಹೆಚ್ಚು ಬೈಯುತ್ತಲೂ ಇರಲಿಲ್ಲ. ಹೆಚ್ಚು ಪ್ರೀತಿಯನ್ನೂ ತೋರುತ್ತಿರಲಿಲ್ಲ. ಒಂದು ದಿನ ಧೈರ್ಯ ಮಾಡಿ, ತುಂಬಾ ದಿನದಿಂದ ತನ್ನ ಮನಸ್ಸು ಕೊರೆಯುತ್ತಿದ್ದ ಅನುಮಾನ ಪರಿಹರಿಸಲು, ಸ್ವಲ್ಪ ಪ್ರಸನ್ನಳಾಗಿದ್ದಾಗ ರಾಮು ಕಾಕಿಯನ್ನು ಕೇಳಿದ್ದ, 'ಕಾಕಿ, ನೀನು ನನ್ನ ಬಾಬಾಗೆ ಏನಾಗಬೇಕು?' ತಟ್ಟನೆ ಅವಳ ಹುಬ್ಬುಗಳು ಗಂಟಿಕ್ಕಿದ್ದವು. 'ಅದನ್ನೆಲ್ಲಾ ಕಟ್ಕೊಂಡು ನಿನಗೇನಾಗ್ಬೇಕಾಗಿದೆ? ನಿನ್ನ ವಯಸ್ಸಿಗೆ ಬಹಳ ಜಾಸ್ತಿ ಮಾತಾಡ್ತೀ. ನಾನು ನಿನಗೆ ರೊಟ್ಟಿ ಬೇಯಿಸಿ ಹಾಕೋದಿಲ್ವಾ? ಇನ್ನೇನು ಬೇಕು ನಿಂಗೆ?'

ತೆಪ್ಪಗಾಗಿದ್ದ ರಾಮು. ಹೌದು, ತಾನಾದರೂ ಏಕೆ ಕೇಳಬೇಕಾಗಿತ್ತು? ತಾಯಿಯ ಬೆಚ್ಚನೆಯ ಅಪ್ಪುಗೆ, ತಂದೆಯ ವಾತ್ಸಲ್ಯದ ನೆನಪೇ ಅವನಿಗೆ ಇರಲಿಲ್ಲ.